**ದಿಃ13.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2ನೇ ಎದುರುದಾರರ ಪರ ಶ್ರೀ.ಬಿ.ಎಂ.ಎಸ್ ವಕೀಲರಿಂದ ಃ**

ಅಪಘಾತ ಎಲ್ಲಿ ಸಂಭವಿಸಿದೆ ಎಂದರೆ ಸಾಕ್ಷಿ ಮಕ್ಕಂದೂರು ಬಳಿ ಸೋಮವಾರಪೇಟೆ ರಸ್ತೆಯಲ್ಲಿ ಸಂಭವಿಸಿದೆ. ಈ ಅಪಘಾತ ಕಾಂಡನಕೊಳ್ಳಿಯಲ್ಲಿ ಸಂಭವಿಸಿದೆ ಎಂದರೆ ಸರಿ. ಅಪಘಾತ ರಸ್ತೆ ತಿರುವಿನಲ್ಲಿ ಸಂಭವಿಸಿದೆ. ಅಪಘಾತ ಸ್ಥಳದಲ್ಲಿ ಬಸ್ ತಂಗುದಾಣ ಇತ್ತಾ ಎಂದರೆ ಸಾಕ್ಷಿ ಅಪಘಾತ ಸ್ಥಳದಿಂದ ಸ್ವಲ್ಪ ದೂರದಲ್ಲಿ ಇತ್ತು. ಮಡಿಕೇರಿಯಿಂದ ಕಾಂಡನಕೊಳ್ಳಿಗೆ ಹೋಗುವ ರಸ್ತೆಯ ಬಲಬಧಿಯಲ್ಲಿ ಬಸ್ ತಂಗುದಾಣ ಇದೆ. ಅಪಘಾತ ಕಾಲಕ್ಕೆ ಮಡಿಕೇರಿಯಿಂದ ಕಾಂಡನಕೊಳ್ಳಿಯಲ್ಲಿಗೆ ಹೋಗುವ ರಸ್ತೆಯ ಬಲಬಧಿಯಲ್ಲಿ ನಾನು ಇದ್ದೆ. ಅಪಘಾತ ಸಂಬಂಧ ಪೊಲೀಸರಿಗೆ ಅಭಿಷೇಕ ಮತ್ತು ಮಜೀದ್ ದೂರು ಕೊಟ್ಟಿರುತ್ತಾರೆ. ಅಪಘಾತ ಕಾಲಕ್ಕೆ ಮಜೀದ್ ಈತ ಅಪಘಾತ ಸ್ಥಳದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಅಭಿಷೇಕ ಈತ ಇದ್ದರು ಆತ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎನ್ನುತ್ತಾರೆ. ಅಪಘಾತ ಕಾಲಕ್ಕೆ ನಾನು ರಸ್ತೆ ದಾಟುತ್ತಿದ್ದೆ ಎಂದರೆ ಸರಿಯಲ್ಲ. ನಾನು ರಸ್ತೆ ಮನೆ ವಾಹನ ಓಡಾಡುವುದನ್ನು ಗಮನಿಸದೇ ರಸ್ತೆ ದಾಟಲು ಪ್ರಯತ್ನ ಪಟ್ಟಿದ್ದರಿಂದ ನನ್ನ ನಿರ್ಲಕ್ಷತಣದಿಂದ ಈ ಅಪಘಾತ ಸಂಭವಿಸಿದೆ

ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ 1ನೇ ಎದುರುದಾರ ತನ್ನ ಬೈಕನ್ನು ಸಾವಕಾಶವಾಗಿ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಏಕಾಏಕಿ ರಸ್ತೆ ದಾಟಲು ಹೋಗಿ ನನ್ನ ತಪ್ಪಿನಿಂದಾಗಿ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಮಜೀದ್ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ಮಜೀದ್ ಈತ ಖುದ್ದು ನೋಡದೇ ಇದ್ದರು ಮತ್ತು ಅಪಘಾತ ಬಗ್ಗೆ ಆತ ತಿಳಿದುಕೊಳ್ಳದೆ ಪೊಲೀಸರಿಗೆ ಸುಳ್ಳು ದೂರು ದಾಖಲೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಮಜೀದ್ ಈತ ಸುಳ್ಳು ದೂರಿನ ಆಧಾರದ ಮೇಲೆ 1ನೇ ಎದುರುದಾರನ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಸುಳ್ಳು ದೂರು ದಾಖಲಾಗಿರುವುದರಿಂದ ಲಾಭ ಪಡೆದು ಈ ಸುಳ್ಳು ಪರಿಹಾರ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಅರ್ಜಿಯಲ್ಲಿ ಮತ್ತು ನಿಮಂ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತ ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನನಗೆ ಅಪಘಾತದಲ್ಲಿ ತೀವ್ರ ಸ್ವರೂಪದ ಗಾಯ ಆಗಿದೆ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ಸಾಕಷ್ಟು ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಗಾಯಗಳಿಂದಾಗಿ

ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ನಾನು ಯಾವ ರೀತಿ ದಿನನಿತ್ಯದ ಕೆಲಸ ಕಾರ್ಯ ಮಾಡುತ್ತಿದ್ದೆ ಈಗಲೂ ಸಹ ಅದೇ ರೀತಿ ಕೆಲಸ ಕಾರ್ಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಅಪಘಾತದಿಂದಾ ಗಾಯದಿಂದಾಗಿ ಯಾವುದೇ ಅಂಗನ್ಯೂನ್ಯತೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ  ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2ನೇ ಎದುರುದಾರರು ನನಗೆ ಪರಿಹಾರ ಕೊಡಲು ಭದ್ಯಾಷ್ಟರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ನಾನು ಕೊಯಮತ್ತೂರಿನಲ್ಲಿ ಡಿಪ್ಲೊಮೊ ವ್ಯಾಸಂಗ ಮಾಡುತ್ತಿದ್ದೇನೆ. ನನಗೆ ಡಿಕ್ಕಿ ಹೊಡೆಸಿದ ವಾಹನ ಮುಂದಿನಿಂದ ಬಂತು. ಅಪಘಾತ ಸ್ಥಳದಲ್ಲಿ ರಸ್ತೆ ಸುಮಾರು 50 ರಿಂದ 100 ಅಡಿ ನೇರವಾಗಿತ್ತು. ಅಪಘಾತ ಪಡಿಸಿದ ವಾಹನವನ್ನು ಎಷ್ಟು ದೂರದಿಂದ ನೋಡಿದರಿ ಎಂದರೆ ಸಾಕ್ಷಿ 20 ರಿಂದ 50 ಅಡಿ ದೂರದಿಂದ ನೋಡಿದೆ. ಸಾಕ್ಷಿ ಮುಂದುವರೆದು ಅಪಘಾತ ಸ್ಥಳದಲ್ಲಿ ರಸ್ತೆ ಗುಂಡಿ ಇದಿದ್ದರಿಂದ ಅದನ್ನು ಬೈಕ್ ಚಾಲಕ ತಪ್ಪಿಸಲು ಹೋಗಿ ನನಗೆ ಡಿಕ್ಕಿ ಹೊಡೆಸಿದ ಎನ್ನುತ್ತಾರೆ.

ನಾನು ಕಾಂಡನಕೊಳ್ಳಿಯಲ್ಲಿಂದ ಮಡಿಕೇರಿ ಕಡೆ ಬರುತ್ತಿದ್ದೆ. ನಾನು ಬರುತ್ತಿದ್ದ ಸ್ಥಳದಲ್ಲಿ ರಸ್ತೆ ಪಕ್ಕದಲ್ಲಿ 5 ಅಡಿ ಅಷ್ಟು ಕಚ್ಚಾ ರಸ್ತೆ ಸಹ ಇತ್ತು ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನಾನು ರಸ್ತೆ ಅಂಚಿನಲ್ಲಿ ಇದ್ದೆ. ಸಾಕ್ಷಿ ಮುಂದುವರೆದು ನನಗೆ ಡಿಕ್ಕಿ ಹೊಡೆಸಿದ್ದರಿಂದ ಹಾರಿ ರಸ್ತೆಗೆ ಬಿದ್ದೆ. ಅಪಘಾತ ಕಾಲಕ್ಕೆ ಅಪಘಾತ ಯಾರು ಮಾಡಿದ್ದರು ಎಂದು ನನಗೆ ಗೊತ್ತಾಗಲಿಲ್ಲ. ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಯಲ್ಲಿ ನಾನು ಕೋಮಾದಲ್ಲಿ ಇದ್ದೆ. ಒಂದು ತಿಂಗಳ ಆದ ನಂತರ ನನ್ನ ಕುಟುಂಬಸ್ಥರು ಮತ್ತು ಇತರರು ಯಾರು ಅಪಘಾತ ಪಡಿಸಿದರು ಎಂದು ತಿಳಿಸಿದರು ಎನ್ನುತ್ತಾರೆ. ನಾನು ನ್ಯಾಯಾಲಯದ ಮುಂದೆ ಅಪಘಾತ ಸ್ಥಳದ ಕಚ್ಚಾ ನಕಾಶೆಯನ್ನು ಹಾಜರು ಮಾಡಿದೇನೆ. ಸದರಿ ಕಚ್ಚಾ ನಕಾಶೆಯಲ್ಲಿ ಅಪಘಾತ ಟಾರ್ ರಸ್ತೆಯಲ್ಲಿ ಸಂಭವಿಸಿದೆ ಎಂದು ಉಲ್ಲೇಖ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಡಿಕ್ಕಿಪಡಿಸಿದ್ದರಿಂದ ಟಾರ್ ರಸ್ತೆಗೆ ಬಿದ್ದೆ ಎನ್ನುತ್ತಾರೆ. ಕಚ್ಚಾ ನಕಾಶೆಯಲ್ಲಿ ಟಾರ್ ರಸ್ತೆ ಪಕ್ಕದಲ್ಲಿ ಮೂರು ಅಡಿ ಕಚ್ಚಾ ರಸ್ತೆ ಇದೆ ಎಂದು ತೋರಿಸಲಾಗಿದೆ ಎಂದರೆ ಸರಿ. ಕಚ್ಚಾ ನಕಾಶೆಯಲ್ಲಿ ಹಟ್ಟಿಹೊಳೆಯಿಂದ ಮಡಿಕೇರಿಗೆ ಬರುವ ರಸ್ತೆ ನೇರವಾಗಿದೆ ಎಂದು ತೋರಿಸಲಾಗಿದೆ ಎಂದರೆ ಸರಿ. ನನ್ನ ಮನೆ ಮಾದಾಪುರದಲ್ಲಿ ಇದೆ. ಸಾಕ್ಷಿ ಮುಂದುವರೆದು ನಮ್ಮ ಮನೆ ನಂದಿಮೊಟ್ಟೆ ಯಲ್ಲಿ ಇದೆ ಎನ್ನುತ್ತಾರೆ. ಮಡಿಕೇರಿಯಿಂದ ಹೋಗುವ ರಸ್ತೆಯಲ್ಲಿ ಮೊದಲು

ಕಾಂಡನಕೊಳ್ಳಿಯಲ್ಲಿ ಸಿಗುತ್ತದೆ ಆ ನಂತರ ಮಾದಾಪುರ ಇದೆ. ಕಾಂಡನಕೊಳ್ಳಿಗೆ ನನ್ನ ಸ್ನೇಹಿತನನ್ನು ಭೇಟಿ ಮಾಡಲು ಬಂದಿದ್ದೆ. ಸಾಕ್ಷಿ ಮುಂದುವರೆದು ನಾನು ಕಾಂಡನಕೊಳ್ಳಿಗೆ ನಡೆದುಕೊಂಡು ಬಂದಿದ್ದೆ ಮತ್ತು ನನ್ನ ಸ್ನೇಹಿತನನ್ನು ಭೇಟಿ ಮಾಡಿ ಅಪಘಾತ ಕಾಲಕ್ಕೆ ಹೋಗುತ್ತಿದ್ದೆ ಎನ್ನುತ್ತಾರೆ. ಅಪಘಾತ ಕಾಲಕ್ಕೆ ನಾನು ಬಸ್ ತಂಗುದಾಣದ ಕಡೆ ಹೋಗುತ್ತಿದ್ದೆ. ಅಪಘಾತ ನಂತರ ನನ್ನನ್ನು ಮಡಿಕೇರಿ ಆಸ್ಪತ್ರೆಗೆ ತರಲಾಗಿತ್ತು. ಯಾರು ಆಸ್ಪತ್ರೆಗೆ ತಂದರು ಎಂದು ನನಗೆ ಗೊತ್ತಾಗಲಿಲ್ಲ. ಅಪಘಾತ ಸಂಬಂಧ ವೈದ್ಯರ ಬಳಿ ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ನನಗೆ ಡಿಕ್ಕಿ ಹೊಡೆಸಿದ್ದರಿಂದ ಹಾರಿ ಬಿದ್ದೆ ನನಗೆ ತಲೆಗೆ ಪೆಟ್ಟಾಗಿದ್ದರಿಂದ ಪ್ರಜ್ಞೆ ಇರಲಿಲ್ಲ ಎನ್ನುತ್ತಾರೆ. ಗಾಯದ ಪ್ರಮಾಣ ಪತ್ರದಲ್ಲಿ ಬೈಕ್ ಮೇಲಿಂದ ಬಿದಿದ್ದರಿಂದ ಪೆಟ್ಟಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಯಾರು ಬರೆಸಿದರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ನಡೆದುಕೊಂಡು ಹೋಗುತ್ತಿದ್ದಾಗ ಬೈಕ್ ನೋಂದಣಿ ಸಂಖ್ಯೆ ಕೆಎ12ಬಿ4969 ಡಿಕ್ಕಿ ಹೊಡೆಸಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೊ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ವಾಹನಕ್ಕೂ ಮತ್ತು ಈ ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಸಿಗಲಿ ಎಂದು ಬೈಕ್ ನೋಂದಣಿ ಸಂಖ್ಯೆ

ಕೆಎ12ಬಿ4969 ವಾಹನವನ್ನು ಈ ಅಪಘಾತದಲ್ಲಿ ಸೇರ್ಪಡೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ಹಾಗೂ 2ನೇ ಎದುರುದಾರರು ಅಪಘಾತ ಕಟ್ಟೆ ಕಟ್ಟುವ ಉದ್ದೇಶದಿಂದ ಶಾಮೀಲು ಆಗಿದ್ದೇವೆ ಎಂದರೆ ಸರಿಯಲ್ಲ. ಅಪಘಾತ ಸಂಬಂಧ ದೂರು ದಾಖಲಾಗಿದ್ದನ್ನು ತಿಳಿದುಕೊಂಡರಾ ಎಂದರೆ ಸಾಕ್ಷಿ ನನಗೆ ಪ್ರಜ್ಞೆ ಬಂದ ನಂತರ ತಿಳಿದುಕೊಂಡೆ ಎನ್ನುತ್ತಾರೆ. ಅಪಘಾತ ಸಂಬಂಧ ಮೂರು ದಿನ ತಡವಾಗಿ ದೂರು ದಾಖಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದೂರು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯ ಆಗದೇ ಇದ್ದರು ಮಡಿಕೇರಿ, ಮಾದಾಪುರ ಮತ್ತು ಮಂಗಳೂರಿನಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆಗಾಗಿ ಯಾವುದೇ ಖರ್ಚು ಆಗಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.10 ರಿಂದ 42 ರ ದಾಖಲೆಗಳನ್ನು ಈ ಕೇಸಿಗಾಗಿ ಸೃಷ್ಟಿಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ಕೆಲಸ ಕಾರ್ಯಗಳನ್ನು ಮಾಮೂಲಿಯಂತೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಾದ ಗಾಯಗಳು ವಾಸಿಯಾಗಿವೆ. ಸಾಕ್ಷಿ ಮುಂದುವರೆದು ಹೆಚ್ಚು

ಒತ್ತಡವಾದರೆ ತಲೆ ನೋವು ಬರುತ್ತದೆ ಎನ್ನುತ್ತಾರೆ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಅರ್ಜಿ ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.